# ಪ್ರೀತಿ

'ಪ್ರೀತಿ'ಯ ಬಗ್ಗೆ ಯೇಸುವಿನ ಆಜ್ಞೆಯನ್ನು ಕಲಿಸಲು ಈ ಕೆಳಗಿನವು ಒಂದು ರೂಪುರೇಖೆಯಾಗಿದೆ.

## ಭಾಗ ಒಂದು
## ಹಿಂತಿರುಗಿ ನೋಡುವುದು

### ಪ್ರಾರ್ಥನೆ

ಒಟ್ಟಿಗೆ ಪ್ರಾರ್ಥನೆಯೊಂದಿಗೆ ಆರಂಭಿಸಿರಿ.

# ಹೊಣೆಗಾರಿಕೆ

ಮಾಡಿದ ಬದ್ಧತೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ.
ಉದಾಹರಣೆಗೆ, ಹೀಗೆ ಕೇಳಿರಿ:

- ನೀವು ಕೊನೆಯ ಬಾರಿಗೆ ಸುವಾರ್ತೆ ಅಥವಾ ಕಥೆಯನ್ನು ಯಾರೊಂದಿಗೂ ಹಂಚಿಕೊಂಡಿದ್ದೀರಾ?
- ನೀವು ಪ್ರತಿದಿನ ಸತ್ಯವೇದವನ್ನು ಓದಿದ್ದೀರಾ ಅಥವಾ ಕೇಳಿದ್ದೀರಾ?
- ದೇವರು ನಿಮಗೆ ಕಲಿಸಿದ್ದನ್ನು ನೀವು ಹೇಗೆ ಪಾಲಿಸಿದ್ದೀರಿ?
- ನೀವು ಹಂಚಿಕೊಳ್ಳಲು ಬಯಸುವ ಯಾವುದೇ ಪ್ರಾರ್ಥನೆ ವಿನಂತಿಗಳು ಅಥವಾ ಕಥೆಗಳು ಇದೆಯೇ?

# ಭಾಗ ಎರಡು
# ಮೇಲಕ್ಕೆ ನೋಡುವುದು

## ಅಧ್ಯಯನ

ಒಟ್ಟಿಗೆ ಸತ್ಯವೇದದ ಅಧ್ಯಯನ ಮಾಡುವುದರ ಮೂಲಕ ಪ್ರೀತಿಯ ವಿಷಯವಾಗಿ ಮಾಡುವ ಯೇಸುವಿನ ಆಜ್ಞೆಯ ಬಗ್ಗೆ ಕಲಿಸಿ. ಯೇಸು ಆಜ್ಞೆಯನ್ನು ನೀಡಿದ ಸಮಯವನ್ನು ಮೊದಲು ಓದಿ ಮತ್ತು ನಿಜವಾದ ಕಥೆಯನ್ನು ಚರ್ಚಿಸಿ ಅದು ವಿಧೇಯತೆ ಹೇಗಿರಬಹುದು ಎಂಬುದನ್ನು ವಿವರಿಸುತ್ತದೆ.

ಮತ್ತಾಯ 22:34–40:

> ಆತನು ಸದ್ದುಕಾಯರ ಬಾಯಿ ಕಟ್ಟಿದನೆಂದು ಫರಿಸಾಯರು ಕೇಳಿ ಅಲ್ಲಿಗೆ ಕೂಡಿಬಂದರು. ಅವರಲ್ಲಿದ್ದ ಒಬ್ಬ

ಧರ್ಮೋಪದೇಶಕನು ಆತನನ್ನು ಪರೀಕ್ಷೆಮಾಡಬೇಕೆಂದು – ಗುರುವೇ, ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾದದ್ದು? ಎಂದು ಆತನನ್ನು ಕೇಳಿದಕ್ಕೆ ಆತನು – ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣಹೃದ –ಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೇಯದು. ಇದಕ್ಕೆ ಸಮಾನವಾದ ಎರಡನೇ ಆಜ್ಞೆ ಉಂಟು, ಅದು ಯಾವದಂದರೆ – ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದೇ. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಾಗ್ರಂಥಕ್ಕೂ ಆಧಾರವಾಗಿದೆ ಎಂದು ಹೇಳಿದನು.

ಯೇಸುವಿನ ಅನುಯಾಯಿಗಳಾಗಿ, ನಮ್ಮ ದೇವರಾದ ಕರ್ತನನ್ನು ನಮ್ಮ ಎಲ್ಲರೊಂದಿಗೆ ಪ್ರೀತಿಸುವಂತೆ ನಮಗೆ ಆಜ್ಞಾಪಿಸಲಾಗಿದೆ. ಹಾಗೂ ನಮ್ಮ ನೆರೆಯವರನ್ನು ನಮ್ಮಂತೆಯೇ ಪ್ರೀತಿಸುವಂತೆ ನಮಗೆ ಆಜ್ಞಾಪಿಸಲಾಗಿದೆ. ದೇವರ ನಿಯಮವು ಪ್ರೀತಿಯಲ್ಲಿ ನೆರವೇರುತ್ತದೆ.

ಲೂಕ 10:25–37:

ಆಗ ಒಬ್ಬ ಧರ್ಮೋಪದೇಶಕನು ಎದ್ದು ಆತನನ್ನು ಪರೀಕ್ಷಿಸುವುದಕ್ಕಾಗಿ – ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯನಾಗುವಂತೆ ಏನು ಮಾಡಬೇಕು ಎಂದು ಕೇಳಲು

ಆತನು ಅವನಿಗೆ – ಶಾಸ್ತ್ರದಲ್ಲಿ ಏನು ಬರೆದದೆ? ಹೇಗೆ ಓದಿದ್ದೀ? ಎಮದು ಹೇಳಿದನು. ಅದಕ್ಕೆ ಅವನು – ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣಹೃದ – ಯದಿಂದಲೂ ನಿನ್ನ ಪೂರ್ಣಪ್ರಾನದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂದು ಬರೆದದೆ ಎಂದು ಹೇಳಿದನು. ಆದರೆ ಅವನು ತನ್ನನ್ನು ನೀತಿವಂತನೆಂದು ತೋರಿಸಿಕೊಳ್ಳುವುದಕ್ಕೆ ಅಪೇಕ್ಷಿಸಿ – ನನ್ನ ನೆರೆಯವನು ಯಾರು? ಎಂದು ಯೇಸುವನ್ನು ಕೇಳಲು ಯೇಸು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನೆಂದರೆ – ಒಬ್ಬಾನೊಬ್ಬ ಮನುಷ್ಯನು ಯೆರೂಸಲೇಮಿನಿ – ಂದ ಘಟ್ಟಾ ಇಳಿದು ಯೆರಿಕೋವಿಗೆ ಹೋಗುತ್ತಿರುವಾಗ ಕಳ್ಳರ ಕೈಗೆ ಸಿಕ್ಕಿದನು. ಅವರು ಅವನನ್ನು ಸುಲಿಗೆ ಮಾಡಿಕೊಂಡು ಗಾಯವಾಗುವಷ್ಟು ಹೊಡೆದು ಅವನನ್ನು ಅರೆಜೀವಮಾಡಿ ಬಿಟ್ಟುಹೋದರು. ಆಗ ಹೇಗೋ ಒಬ್ಬ ಯಾಜಕನು ಆ ದಾರಿಯಲ್ಲಿ ಇಳಿದುಬರುತ್ತಾ ಅವನನ್ನು ಕಂಡು ವಾರೆಯಾಗಿ ಹೋದನು ಅದೇ ರೀತಿಯಲ್ಲಿ ಒಬ್ಬ ಲೇವಿಯನೂ ಆ ಸ್ಥಳಕ್ಕೆ ಬಂದು ಅವನನ್ನು ಕಂಡು ವಾರೆಯಾಗಿ ಹೋದನು ಆದರೆ ಒಬ್ಬ ಸಮಾರ್ಯದವನು ಪ್ರಯಾಣ ಮಾಡುತ್ತಾ ಅವನಿದ್ದಲ್ಲಿಗೆ ಬಂದು ಅವನನ್ನು ಕಂಡು ಕನಿಕರಿಸಿ ಅವನ ಹತ್ತಿರಕ್ಕೆ ಹೋಗಿ ಅವನ ಗಾಯಗಳಲ್ಲಿ ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಹೊಯ್ದು ಕಟ್ಟಿ ತನ್ನ ಸ್ವಂತ ವಾಹನದ

ಮೇಲೆ ಹತ್ತಿಸಿಕೊಂಡು ಛತ್ರಕ್ಕೆ ಕರಕೊಂಡು ಹೋಗಿ ಅವನನ್ನು ಆರೈಕೆಮಾಡಿದನು. ಮರುದಿನ ಅವನು ಎರಡು ಹಣಗಳನ್ನು ತೆಗೆದು ಛತ್ರದವನಿಗೆ ಕೊಟ್ಟು – ಇವನನ್ನು ಆರೈಕೆ ಮಾಡು; ಇದಕ್ಕಿಂತ ಹೆಚ್ಚಾಗಿ ಏನಾದರೂ ವೆಚ್ಚಮಾಡಿದರೆ ನಾನು ಹಿಂತಿರುಗಿ ಬಂದಾಗ ನಿನಗೆ ಕೊಡುವೆನು ಅಂದನು. ಈ ಮೂವರಲ್ಲಿ ಯಾವನು ಕಳ್ಳರ ಕೈಗೆಸಿಕ್ಕಿದವನಿಗೆ ನೆರೆಯವನಾದನು.ಎಂದು ನಿನಗೆ ತೋರುತ್ತದೆ ಹೇಳು ಎಂದು ಕೇಳಿದ್ದಕ್ಕೆ ಧರ್ಮೋಪದೇಶಕನು – ಅವನಿಗೆ ದಯೆ ತೋರಿಸಿದವನೇ ಅಂದನು. ಆಗ ಯೇಸು ಅವನಿಗೆ – ಹೋಗು ನೀನೂ ಅದರಂತೆ ಮಾಡು ಎಂದು ಹೇಳಿದನು.

ಈ ವಾಕ್ಯಭಾಗದ ಕಥೆಯನ್ನು ಓದಿದ ನಂತರ, ಈ ವಿಧಾನಗಳಲ್ಲಿ ಪರಿಶೀಲಿಸಿ:

- ನೆನಪಿನಿಂದ ಕಥೆಯನ್ನು ಹೇಳಿರಿ.
- ಕಥೆಯ ಬಗ್ಗೆ ಮಾತನಾಡಿರಿ. ಏನಾಯಿತು?
- ಕಥೆಯನ್ನು ಮತ್ತೆ ಹೇಳಿ ಅಥವಾ ಓದಿ.
- ಕಥೆಯನ್ನು ವಿವರಿಸುವ ನಾಟಕವನ್ನು ಮಾಡಿ.
- ಕಥೆಯನ್ನು ವಿವರಿಸುವ ಚಿತ್ರಗಳನ್ನು ಬರೆಯಿರಿ.

ಕಥೆಯನ್ನು ಪರಿಶೀಲಿಸಿದ ನಂತರ, ಕಥೆಯನ್ನು ಆಧರಿಸಿ ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ:

- ದೇವರ ಬಗ್ಗೆ ನಾವು ಏನ್ನು ಕಲಿತೆವು?
- ಮನುಷ್ಯರ ಬಗ್ಗೆ ನಾವು ಏನನ್ನು ಕಲಿತೆವು?
- ನಾವು ಏನು ಮಾಡಬಾರದು?
- ನಾವು ಏನು ಮಾಡಬೇಕು?

ಈ ಸಾಮಾನ್ಯ ಪ್ರಶ್ನೆಗಳನ್ನು ಚರ್ಚಿಸಿದ ನಂತರ, ಈ ನಿರ್ದಿಷ್ಟ ಕಥೆಗೆ ಕೆಳಗಿನವುಗಳು ಸಹಾಯಕವಾಗಬಹುದು.

ಕೆಳಗಿನವುಗಳನ್ನು ಚರ್ಚಿಸಿ:

- ಪ್ರೀತಿ ಎಂದರೇನು?
  ಯೋಹಾನ 15:13 ಮತ್ತು 1 ಕೊರಿಂಥ 13:1–13 ಈ ವಾಕ್ಯಗಳನ್ನು ಓದಿರಿ.

- ನಾವು ಏಕೆ ಪ್ರೀತಿ ಮಾಡಬೇಕು?
  ಯೋಹಾನ 13:34–35 ಅನ್ನು ಓದಿರಿ. ಏಕೆಂದರೆ ಯೇಸುವು ನಮ್ಮನ್ನು ಮೊದಲು ಪ್ರೀತಿಸಿದನು, ಆದದರಿಂದ ಈಗ ನಾವೂ ಪ್ರೀತಿಸುತ್ತೇವೆ. ಇತರರ

ಮೇಲಿನ ಪ್ರೀತಿಯು ಯೇಸುವಿನ ಬಗ್ಗೆ ಎಲ್ಲಾ ಆನರಿಗೆ ಕಲಿಸುತ್ತದೆ.

- ನಾವು ಯಾರನ್ನು ಪ್ರೀತಿಸಬೇಕು?
  ನಾವು ದೇವರನ್ನೂ ನೆರೆಯವರನ್ನೂ ಪ್ರೀತಿಸಬೇಕೆಂದು ಆಜ್ಞಾಪಿಸಲ್ಪಟ್ಟಿದೆ.

- ನಾವು ಹೇಗೆ ಪ್ರೀತಿಸಬೇಕು?
  ಯೋಹಾನ 14:15 ಅನ್ನು ಓದಿರಿ. ನಾವು ಯೇಸುವನ್ನು ಪ್ರೀತಿಸುವವರಾದರೆ, ಆತನಿಗೆ ವಿಧೇಯರಾಗುತ್ತೇವೆ. ನಾವು ಇತರರನ್ನು ಪ್ರೀತಿಸಿದರೆ, ನಾವು ಅವರೊಂದಿಗೆ ಯೇಸುವಿನ ಬಗ್ಗೆ ಹಂಚಿಕೊಳ್ಳುತ್ತೇವೆ ಮತ್ತು ಯೇಸು ಜನರನ್ನು ಹೇಗೆ ಪ್ರೀತಿಸುತ್ತಾನೆ ಎಂಬುದರ ಉದಾಹರಣೆಯನ್ನು ಅನುಸರಿಸುತ್ತೇವೆ.

## ಅಭ್ಯಾಸ ಮಾಡಿ

ದೇವರನ್ನು ಪ್ರೀತಿಸಲು ಕ್ರಮಗಳನ್ನು ತೆಗೆದುಕೊಳ್ಳಿ. ಆತನ

ಆಜ್ಞೆಗಳನ್ನು ಪಾಲಿಸುವುದು ಅಥವಾ ಅವನನ್ನು ಒಟ್ಟಿಗೆ ಆರಾಧಿಸುವುದು ಕೆಲವು ಹಂತಗಳಾಗಿರಬಹುದು. ನಿಮ್ಮ ನೆರೆಹೊರೆಯವರನ್ನು ಒಟ್ಟಿಗೆ ಪ್ರೀತಿಸಲು ಕ್ರಮಗಳನ್ನು ತೆಗೆದುಕೊಳ್ಳಿ.

## ಭಾಗ ಮೂರು
## ಮುಂದಾಗಿ ನೋಡುವುದು

### ಬದ್ಧತೆ

ಯೇಸುವಿನ ಕಥೆ ಮತ್ತು ಆಜ್ಞೆಯಿಂದ ಏನು ಪಾಲಿಸಬೇಕೆಂದು ಚರ್ಚಿಸಿ. ಮುಂದಿನ ಭೇಟಿಯ ಮೊದಲು ಪಾಲಿಸಬೇಕಾದ ಕೆಲವು ಮಾರ್ಗಗಳು ಕೆಳಕಂಡಂತಿರುತ್ತದೆ:

- ನಿಮ್ಮ ನೆರೆಹೊರೆಯವರಿಗೆ ಸಹಾಯ ಮಾಡುವ ಮೂಲಕ ಉದ್ದೇಶಪೂರ್ವಕವಾಗಿ ಪ್ರೀತಿಯನ್ನು ತೋರಿಸಲು ಸಮಯ ತೆಗೆದುಕೊಳ್ಳಿ.

- ಲೂಕ 10:25–37 ಈ ವಾಕ್ಯದಲ್ಲಿರುವ ಕಥೆಯನ್ನು ಹೇಳಿರಿ, ನಿಮ್ಮ ಕಥೆಯನ್ನೂ ದೇವರ ಕಥೆಯನ್ನೂ ಹೇಳಿರಿ.
- ಪ್ರತಿದಿನ ಪ್ರಾರ್ಥನೆ ಮಾಡಿರಿ ಮತ್ತು ಸತ್ಯವೇದವನ್ನೂ ಓದಿರಿ.

## ಪ್ರಾರ್ಥನೆ

ಪ್ರಾರ್ಥನೆಯಲ್ಲಿ ಸಮಯವನ್ನು ಒಟ್ಟಿಗೆ ಅಂತ್ಯಮಾಡಿರಿ. ಎಲ್ಲರೂ ಮಾಡಿದ ಬದ್ಧತೆಗಳಿಗಾಗಿ ಪ್ರಾರ್ಥಿಸಿ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.